**ಅಸಲು ದಾವಾ ಸಂಖ್ಯೆಃ 286/2022** ಡಿ.ಡಬ್ಲೂ -1

ದಿನಾಂಕಃ 19.11.2024 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ **ವಾದಿ ಪರ ಶ್ರೀ ಆರ್ ಜೆ ವಕೀಲರಿಂದ**

ವಾದಿ ಚಂದ್ರಶೇಖರಯ್ಯ ನನ್ನ ಅಣ್ಣ. ನಮ್ಮ ತಂದೆ ಹೆಸರು ಸಿದ್ದಗಂಗಯ್ಯ. ನಮ್ಮ ತಂದೆಗೆ ನಾವು 7 ಜನ ಮಕ್ಕಳು. ನನಗೆ ಶಿವಕುಮಾರ್ ಮತ್ತು ಸಿದ್ದಲಿಂಗಯ್ಯ ಎಂಬ ಸಹೋದರರು ಇದ್ದರು ಎಂದರೆ ಸರಿ. 1993 ನೇ ಇಸವಿಯಲ್ಲಿ ನನ್ನ ಸಹೋದರ ಶಿವಕುಮಾರ್, ವಾದಿ ಮತ್ತು ನನ್ನ ನಡುವೆ ವಿಭಾಗ ಪತ್ರದಂತೆ ಒಟ್ಟು ಕುಟುಂಬದ ಆಸ್ತಿಗಳು ವಿಭಾಗವಾಗಿರುತ್ತವೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಪ್ರತಿವಾದ ಪತ್ರ ಮತ್ತು ಸಾಕ್ಷಿ ವಿಚಾರಣೆ ಪತ್ರದಲ್ಲಿ ದಿನಾಂಕ 15.02.1993 ರಲ್ಲಿ ವಿಭಾಗ ಪತ್ರವಾಗಿದೆ ಎಂದು ಬರೆಸಿದ್ದೇನೆ ಎಂದರೆ ಸರಿ. ಸದರಿ ವಿಭಾಗ ಪತ್ರದಂತೆ ಸರ್ವೆ ನಂ. 68/2 ರಲ್ಲಿ ನನಗೆ 15 ಗುಂಟೆ ಆಸ್ತಿ ಮತ್ತು ವಾದಿಗೆ 15 ಗುಂಟೆ ಆಸ್ತಿ ಬಂದಿದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ. 68/2 ರಲ್ಲಿ ನನ್ನ ಸಹೋದರ ಶಿವಕುಮಾರ್ ರವರ ಹೆಸರಿಗೆ 20 ಗುಂಟೆ ಆಸ್ತಿ ಹಿಸ್ಸೆ ಬಂದಿರುತ್ತದೆ ಎಂದರೆ ಸರಿ. ಸದರಿ ವಿಭಾಗ ಪತ್ರದಂತೆ ವಾದಿ ಮತ್ತು ನನ್ನ ಹೆಸರಿಗೆ ಎಂ ಆರ್ 6/1995-96 ರಂತೆ ಖಾತೆ ಬಂದಿರುತ್ತದೆ ಎಂದರೆ ಸರಿ.

ಸರ್ವೆ ನಂ. 68/2 ರ ಪೂರ್ವ ದಿಕ್ಕಿಗೆ ಮೊದಲಕೋಟೆಯಿಂದ ಗೋವಿಂದಪುರಕ್ಕೆ ಹೋಗುವ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಗೆ ಲಗತ್ತಾಗಿ ನನ್ನ ಹಿಸ್ಸೆಗೆ ಬಂದಿರುವ ಸರ್ವೆ ನಂ. 68/2 ರ 15 ಗುಂಟೆ ಆಸ್ತಿ ಇದೆ ಎಂದರೆ ಸರಿ. ನನ್ನ ಸದರಿ ಜಮೀನಾದ ನಂತರ ಉತ್ತರಕ್ಕೆ ವಾದಿಗೆ ಸೇರಿದ ಸರ್ವೆ ನಂ. 68/2 ರ 15 ಗುಂಟೆ ಆಸ್ತಿ ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ವಾದಿಯು ಮನೆ ಕಟ್ಟಿಕೊಂಡು ವಾಸವಿದ್ದಾರೆ ಎಂದರೆ ಸರಿ. ನಾನೂ ಕೂಡ ನನ್ನ ಹಿಸ್ಸೆಗೆ ಬಂದಿರುವ ಸರ್ವೆ ನಂ. 68/2 ರ 15 ಗುಂಟೆ ಆಸ್ತಿಯಲ್ಲಿಯೇ ಮನೆ ಕಟ್ಟಿಕೊಂಡು ವಾಸವಿದ್ದೇನೆ ಎಂದರೆ ಸರಿ. ಮೊದಲಕೋಟೆ ರಸ್ತೆಯಿಂದ ನನ್ನ ಜಮೀನನ್ನು ದಾಟಿಯೇ ವಾದಿಯ ಜಮೀನಿಗೆ ಹೋಗಬೇಕು ಎಂದರೆ ಸರಿ. 1993 ರಲ್ಲಿ ವಿಭಾಗ ಪತ್ರ ಆದಾಗಿನಿಂದಲೂ ವಾದಿಯು ಮೊದಲಕೋಟೆ ರಸ್ತೆಯಿಂದ ನನ್ನ ಜಮೀನಿನಲ್ಲಿ ಇರುವ ದಾರಿಯಲ್ಲಿಯೇ ಹಾದುಕೊಂಡು ವಾದಿಯ ಜಮೀನಿಗೆ ಹೋಗುತ್ತಿದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಮೊದಲು 3 ಅಡಿ ಅಗಲದ ಕಾಲುದಾರಿ ಇತ್ತು ನಂತರ ನಾನು ಅದನ್ನು 5 ಅಡಿ ಅಗಲ ಕಾಲುದಾರಿ ಬಿಟ್ಟಿದ್ದೇನೆ ಆದರೂ ತೊಂದರೆ ಕೊಡಲು ಈ ದಾವೆ ಹಾಕಿದ್ದಾರೆ ಎಂದು ನುಡಿಯುತ್ತಾರೆ. ವಾದಿಯ ಜಮೀನಿಗೆ ನನ್ನ ಜಮೀನಿನಲ್ಲಿ ಹಾದುಹೋಗಿರುವ ದಾರಿಯನ್ನು ಹೊರತುಪಡಿಸಿ ಬೇರೆ ದಾರಿ ಇಲ್ಲ ಎಂದರೆ ಸಾಕ್ಷಿಯು ಹೌದು 5 ಅಡಿ ಅಗಲದ ನನ್ನ ಜಮೀನಿನಲ್ಲಿರುವ ಕಾಲುದಾರಿ ಹೊರತುಪಡಿಸಿ

ಬೇರೆ ದಾರಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಜಮೀನಿನಲ್ಲಿರುವ ದಾರಿ 5 ಅಡಿ ಅಗಲದಲ್ಲ 10 ಅಡಿ ಅಗಲವಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 12 ಪೋಟೋ ತೋರಿಸಿ ಸದರಿ ಪೋಟೋದಲ್ಲಿ ಕಾಣುವ ದಾರಿಯೇ ಸದರಿ ಕಾಲುದಾರಿ ಎಂದು ಕೇಳಲಾಗಿ ಸಾಕ್ಷಿಯು ಪೋಟೋವನ್ನು ನೋಡಿ ಹೌದು ಎಂದು ಒಪ್ಪಿ ಕೊಂಡಿರುತ್ತಾರೆ. ನಿಪಿ 12 ಪೋಟೋದಲ್ಲಿ ಕಾಣುವ ರೀತಿಯ ದಾರಿಯನ್ನು ತೆಂಗಿನ ತುಂಡುಗಳನ್ನು ಅಡ್ಡಹಾಕಿ ನಿಪಿ 10 ಪೋಟೋದಲ್ಲಿ ಕಾಣುವಂತೆ ಮುಚ್ಚಿದ್ದೇನೆ ಎಂದರೆ ಸರಿಯಲ್ಲ. ನಂತರ 10 ಅಡಿ ಅಗಲ ಇದ್ದ ರಸ್ತೆಯನ್ನು ನಿಪಿ 11 ಪೋಟೋದಲ್ಲಿ ಕಾಣುವಂತೆ 5 ಅಡಿ ಅಗಲದ ರಸ್ತೆಯನ್ನು ಮಣ್ಣು ಹಾಕಿ ಮುಚ್ಚಿದ್ದೇನೆ ಎಂದರೆ ಸರಿಯಲ್ಲ. ನಿಪಿ 12 ಪೋಟೋದಲ್ಲಿ ಕಾಣುವ ದಾರಿಯಲ್ಲೇ ವಾದಿಯ ಜಮೀನಿಗೆ ಉಳುಮೆ ಮಾಡಲು ಟ್ರ್ಯಾಕ್ಟರ್ ಹೋಗಬೇಕು ಎಂದರೆ ಸಾಕ್ಷಿಯು ಅಲ್ಲಿ ಟ್ರ್ಯಾಕ್ಟರ್ ಹೋಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ವಾದಿಯು ಅವರ ಹಿಸ್ಸೆಗೆ ಬಂದಿರುವ ಸರ್ವೆ ನಂ. 68/2 ರ 15 ಗುಂಟೆ ಜಮೀನಿನಲ್ಲಿ ಕೊಳವೆ ಬಾವಿ ತೆಗೆಸಿದ್ದಾರೆ ಎಂದರೆ ಸರಿ. ಸದರಿ ಕೊಳವೆ ಬಾವಿ ತೆಗೆಸಲು ಮತ್ತು ಅದರ ರಿಪೇರಿ ಕೆಲಸಕ್ಕೆ ವಾಹನಗಳು ನಿಪಿ 12 ಪೋಟೋದಲ್ಲಿ ಕಾಣುವ ದಾರಿಯಲ್ಲಿ ಓಡಾಡುತ್ತವೆ ಎಂದರೆ ಸರಿಯಲ್ಲ.

ಸೋಮಶೇಖರ್ ಎಂದರೆ ನನ್ನ ಮಗ. ದಿನಾಂಕ 12.05.2022 ರಂದು ನಾವುಗಳು ನಿಪಿ 12 ರಲ್ಲಿ ಕಾಣುವ ರಸ್ತೆಯನ್ನು ಮುಚ್ಚಿದ್ದೇವೆ ಎಂದರೆ ಸರಿಯಲ್ಲ. ಆ ನಂತರ ವಾದಿಯು ಏಕೆ ರಸ್ತೆ ಮುಚ್ಚಿ ದ್ದೀರಿ ಎಂದು ಕೇಳಲು ಬಂದಾಗ ನನ್ನ ಮಗ ಮತ್ತು ಹೆಂಡತಿ ವಾದಿಯ ಮೇಲೆ ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ವಿಚಾರವಾಗಿ ವಾದಿಯ ಹೆಂಡತಿ ನೆಲಮಂಗಲ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು ನನ್ನ ಹೆಂಡತಿ ಮಗ ಮತ್ತು ನನ್ನ ತಮ್ಮ ಶಿವಕುಮಾರ್ ವಿರುದ್ದ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸುಳ್ಳು ದೂರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ದಾವಾ ಸಿ ಷೆಡ್ಯೂಲ್ ಸ್ವತ್ತನ್ನು 1993 ರಿಂದಲೂ ಅವರ ಜಮೀನಿಗೆ ಹೋಗಲು ಉಪಯೋಗಿಸುತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಸಿ ಷೆಡ್ಯೂಲ್ ರಸ್ತೆ ಬಿಟ್ಟುಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇದೆ**

**ಪ್ರಧಾನ** ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.